**Crl. Misc.No.517/2021 PW.1**

ದಿಃ **28-08-2024** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ಶ್ರೀ. **MBK** ವಕೀಲರವರಿಂದಃ</u>

ನಮ್ಮ ಮಾವನವರಾದ ಬಸವರಾಜಪ್ಪ ಹಟ್ಟಿ ಅವರಿಗೆ **75** ವರ್ಷ ಆಗಿರಬಹುದು. ನನ್ನ ಅತ್ತೆಯಾದ ಶಾರದಮ್ಮರವರಿಗೆ **70** ವರ್ಷ ದಾಟಿರುತ್ತದೆ. ನಮ್ಮ ಮಾವನವರ ಹೆಸರಿನಲ್ಲಿ ಇರಕಲಗಡದಲ್ಲಿ **1** ಎಕರೆ **21** ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಅದರ ಸರ್ವೇ ನಂಬರ **209** ಎಂದರೆ ಸರಿ. ಈ ಜಮೀನನ್ನು ಹೊರತುಪಡಿಸಿ ನಮ್ಮ ಮಾವನಿಗೆ ಯಾವ ಜಮೀನು ಇರುವುದಿಲ್ಲ ಎಂದರೆ ಸರಿ. ನನ್ನ ಅತ್ತೆ ಶಾರದಮ್ಮರವರಿಗೆ ಅವರ ತಂದೆ ಕಡೆಯಿಂದ ಜಮೀನು ಬಂದಿರುತ್ತದೆ ಎಂದರೆ ಸರಿ. ಅದರ ಸರ್ವೇ ನಂಬರ **65.** ಅದು **04** ವರೆ ಎಕರೆ ಇರುತ್ತದೆ. ಅವರಿಂದ ಆಸ್ತೀಯನ್ನು ಪಡೆಯಲು ನನಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ತೊಂದರೆ ನಿಡಿರುತ್ತಾರೆ ಎಂದು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಆಸ್ತೀಯಲ್ಲಿ ಪಾಲು ಕೇಳಿ ನನ್ನ ಮಗಳ ಮುಖಾಂತರ ಕೊಪ್ಪಳದ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೇ **180/2020** ನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಅದೇ ರೀತಿ ನಾನು ಸಿ.ಸಿ. ನಂಬರ **73/2021** ನ್ನು ನಾನು ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕೊಪ್ಪಳದಲ್ಲಿ ನನ್ನ ಮಾವ, ಅತ್ತೇ, ಮೈದುನ, ಗಂಡ ಮತ್ತು ಮೈದುನನ ಹೆಂಡತಿಯ ವಿರುದ್ಧ ಕಲಂ.**498** ಎ. **IPC** ಅಡಿಯಲ್ಲಿ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ವಿನಾಕಾರಣ ನನ್ನ ಅತ್ತೇ, ಮಾವ, ಮೈದುನ ಮತ್ತು ಮೈದುನನ ಹೆಂಡತಿಯ ಮೇಲೆ ಅವರು ಹಿಂಸೆ ಕೊಡದಿದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ತಂದೆ ಮತ್ತು ನನ್ನ ಸಹೋದರ ಇರಕಲಗಡ ಗ್ರಾಮಕ್ಕೆ ಹೋಗಿ ಗಲಾಟೆ ಮಾಡಿರುತ್ತೇವೆ ಎಂದರೆ ಸರಿ. ನಮ್ಮ ಈ ಗಾಲಾಟೆಯಿಂದ ಅಲ್ಲಿ ನೆರದಿದ್ದ ಜನರಿಗೆ ನನ್ನ ಗಂಡನಿಗೆ **HIV** ರೋಗ ಇರುವುದು ಅಕ್ಕಪಕ್ಕದವರಿಗೆ ಗೊತ್ತಾಯಿತು ಎಂದರೆ ಸರಿ. ಈ ವಿಷಯ ಜನರಿಗೆ ಗೊತ್ತಾದ ನಂತರ ನನ್ನ ಗಂಡ ರಾತ್ರಿ **12.00** ರ ಮೇಲೆ ಹಾಗೂ ಬೆಳಗಿನ ಜಾವ **03.00** ಗಂಟೆಯ

ಒಳಗೆ ಬಂದು ಅವರ ತಂದೆ ತಾಯಿಯನ್ನು ನೋಡುವ ಸಂದರ್ಭ ಬಂದಿತು ಎಂದರೆ ಸರಿಯಲ್ಲ. ನಾನೇ ಸ್ವತಹ ನನ್ನ ಗಂಡನ ಗೌರವವನ್ನು ಕಳೆದುಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಅವನಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ತೊಂದರೆ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳು ವರದಾ ನನ್ನ ಬಿಟ್ಟು ಯಾವತ್ತಿಗೂ ಒಂದು ವಾರವೂ ಸಹ ಇರುವುದಿಲ್ಲ ಎಂದರೆ ಸರಿ. ವರದಾ ಈಗ **05** ನೇ ತರಗತಿಯಲ್ಲಿ ಓದುತ್ತಿರುತ್ತಾಳೆ. **01** ರಿಂದ **05** ನೇ ತರಗತಿಯವರೆಗೆ ಹೊಳಗುಂದಿಯಲ್ಲಿ ಓದಿರುತ್ತಾಳೆ. ಹೊಳಗುಂದಿಯು ನನ್ನ ಸ್ವಂತ ಊರು ಎಂದರೆ ಸರಿ. ಈಗ ಸಾಕ್ಷಿಗೆ ದಿ.**18-08-2020** ರಂದು ಮಹಿಳಾ ಪೊಲೀಸ್ ಠಾಣೆ ಕೊಪ್ಪಳ ದಲ್ಲಿ ಕೊಟ್ಟ ದೂರಿನ ಪ್ರತಿ ಮತ್ತು ದಿ.**04-03-2021** ರಂದು ಮಹಿಳಾ ಮತ್ತು ಮಕ್ಕಳ ಅಬಿವೃದ್ಧಿ ಕಾರ್ಯಾಲಯ ಹೂವಿನಹಡಗಲಿರವರಿಗೆ ಅರ್ಜಿದಾರಳು ಬರೆದ ಅರ್ಜಿಯನ್ನು ತೋರಿಸಲಾಗಿ ಈ ಎರಡನ್ನು ಸಹ ನಾನೇ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಈ ಎರಡರಲ್ಲಿಯೂ ಸಹ ಬರವಣಿಗೆಯಲ್ಲಿ ವ್ಯತ್ಯಾಸ ಇರುತ್ತದೆ ಆದರೆ ಇವೆರಡನ್ನು ನಾನೇ ಬರೆದಿರುತ್ತೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ಪ್ರಸ್ತುತ ಅರ್ಜಿಯಲ್ಲಿ ನನ್ನ ಮಾವ ಕೇಂದ್ರ ಸರಕಾರಿ ನೌಕರ ಎಂದು ಬರೆದಿರುತ್ತೇನೆ ಆದರೆ ಅವರು ಕೇಂದ್ರ ಸರಕಾರಿ ನೌಕರ ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಮಾವನವರು ಪೋಸ್ಟ್ ಮ್ಯಾನ್ ಆಗಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ರೀತಿಯಾಗಿ ನನ್ನ ಅತ್ತೇ ರಾಜ್ಯ ಸರ್ಕಾರದ ನೌಕರಳು ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಅತ್ತೇ ಅಂಗನವಾಡಿಯಲ್ಲಿ ಕೆಲಸ ಮಾಡುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮೈದುನ ಮತ್ತು ಅವನ ಹೆಂಡತಿ ನನ್ನ ಅತ್ತೇ ಮಾವನ ಜೊತೆಗೆ ಕೂಡಿ ಇರುವುದಿಲ್ಲ ಎಂದರೆ ಸಾಕ್ಷಿಯು ಅವರೂ ಕೂಡಿಕೊಂಡಿಯೇ ಇರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಗಂಡನಿಗೆ **HIV** ರೋಗ ಇರುವ ಬಗ್ಗೆ ನಾನೇ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಗಂಡನಿಗೆ **HIV** ರೋಗ ಇರುವುದರಿಂದ ತಿಂಗಳಿಗೆ **30** ರಿಂದ **40** ಸಾವಿರ ರೂಪಾಯಿ ಖರ್ಚು ಬರುತ್ತದೆ ಎಂದರೆ ಸರಿಯಲ್ಲ. ತಿಂಗಳಿಗೆ **20,000/-** ರೂಪಾಯಿ ಖರ್ಚು ಆಗುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ **HIV** ರೋಗ ಇರುವುದರಿಂದ

ಅವನನ್ನು ಯಾರು ಸೇರಿಸಿಕೊಳ್ಳುವುದಿಲ್ಲ ಹೀಗಾಗಿ ಅವನು ಯಾವುದೇ ಕೇಲಸ ಮಾಡುತ್ತಿಲ್ಲ ಎಂದರೆ ಮಾಡುತ್ತಿರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡನಿಗೆ ಈ ರೋಗ ಇರುವುದರಿಂದ ಸರಿಯಾಗಿ ಊಟ ಹೋಗದೆ ಇರುವುದರಿಂದ ನಿಶಕ್ತನಾಗಿರುತ್ತಾನೆ ಮತ್ತು ತಾಸು **02** ತಾಸಿಗೊಮ್ಮೆ ಶೌಚಾಲಯಕ್ಕೆ ಹೋಗಬೇಕಾಗಿರುವುದರಿಂದ ಅವನನ್ನು ಯಾರು ಕೂಡ ಕೆಲಸಕ್ಕೆ ಸೇರಿಸಿಕೊಳ್ಳುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ **HIV** ಇರುವುದರಿಂದ ನಾನು ಅವನನ್ನು **2020** ರಲ್ಲಿ ಬಿಟ್ಟು ಬಂದಿರುತ್ತೇನೆ ಎಂದರೆ ಸಾಕ್ಷಿಯು ಅವರಿಗೆ ಖಾಯಿಲೆ ಇದೆ ಅಂತ ನಾನು ಬಿಟ್ಟು ಬಂದಿರುವುದಿಲ್ಲ ಅವರಿಗೆ ಲಾಕ್ ಡೌನ್ ಆದಾಗ ಕೆಲಸ ಇರುವುದಿಲ್ಲ ಅಂತ ಬಿಟ್ಟು ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನಂತರ ನನ್ನ ಅತ್ತೇ, ಮಾವ, ಮೈದುನ, ಮೈದುನನ ಹೆಂಡತಿ ವಿರುದ್ಧ ಅವರ ಆಸ್ತೀಯನ್ನು ಪಡೆದುಕೊಳ್ಳಲು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪ್ರಸ್ತುತ ಪ್ರಕರಣದ ಅರ್ಜಿಯಲ್ಲಿ ಬರೆದಿರುವ ಸಂಗತಿಗಳು ಸಂಪೂರ್ಣವಾಗಿ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡ ನನಗೆ ಜೀವನಾಂಶ ಕೊಡಲು ಭಾದ್ಯಸ್ತನಾಗಿರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

**Sd/-**

( ಶ್ರೀಮತಿ ಅಕ್ಷತಾ ಟಿ )
ದಿವಾಣಿ ನ್ಯಾಯಾಧೀಶರು,
ಹಡಗಲಿ.